ಶ್ರೀ ಕೆ. ರಾಮಭಟ್.—ಸ್ವಾಮಿ, ನವ್ಮ ಜಿಲ್ಲೆಯಲ್ಲಿ ಜೂನ್ ತಿಂಗಳಲ್ಲೇ ವಿಪರೀತವಾಗಿ ಮಳೆ ಬರುತ್ತದೆ. ಸಾಮಾನ್ಯವಾಗಿ ವರ್ಷದಲ್ಲಿ ೬ ತಿಂಗಳು ಅಲ್ಲಿ ಮಳೆ ಬೀಳುತ್ತಲೇ ಇರುತ್ತದೆ. ಅಲ್ಲಿ ಕೆಲವರಿಗೆ ಮನೆಗಳಿಲ್ಲ. ಇನ್ನು ಕೆಲವರಿಗೆ ಕಟ್ಟಿಕೊಟ್ಟಿರುವ ಮನೆಗಳೆಲ್ಲಾ ಬಿದ್ದು ಹೋಗಿವೆ. ಆದ್ದರಿಂದ ಅವುಗಳನ್ನು ರಿಪೇರಿ ಮಾಡಿಸಿಕೊಡುವುದಲ್ಲದೆ, ಹೊಸದಾಗಿ ಮನೆಗಳನ್ನೂ ಆದಷ್ಟು ಬೇಗ ಕಟ್ಟಿಸಿ ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮ ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಆದಷ್ಟು ಬೇಗ ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದಿರಿ. ಅದು ಸರ್ವೇಸಾಮಾನ್ಯ ಮನುಷ್ಯರೂ ಒಪ್ಪತಕ್ಕ ಉತ್ತರ. ಆದರೆ ಈ ವರ್ಷದ ಬಜೆಟ್‌ನಲ್ಲಿ ಜನತಾ ಮನೆಗಳಿಗೆ ಎಲ್ಲೂ ಕೂಡ ಹಣವನ್ನು ಇಡುವ ವ್ಯವಸ್ಥೆಯನ್ನೇ ಮಾಡಿಲ್ಲ. ಅಂದ ಮೇಲೆ ನೀವು ಈ ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ತಿಳಿಸುತ್ತೀರಾ ? ಈ ವಿಷಯವನ್ನು ತಾವು ಪರಿಶೀಲಿಸುವುದಾದರೂ ಹೇಗೆ ?

ಶ್ರೀ ಎ. ಲಕ್ಷ್ಮೀಸಾಗರ್.—ಇದರಲ್ಲಿ ಏನಾಗಿದೆ ಎಂದರೆ ಬ್ಯಾಕ್‌ಲಾಗ್ ನಿಂತುಹೋಗಿದೆ...

ಶ್ರೀ ಎಸ್. ಬಂಗಾರಪ್ಪ.—ಬ್ಯಾಕ್‌ಲಾಗ್‌ಗೆ ೧೧.೫೫ ಕೋಟಿ ರೂಪಾಯಿಗಳನ್ನು ನೀವು ಇಟ್ಟಿದ್ದೀರಿ ಇನ್ನೂ ಎಷ್ಟು ಹರಿಜನರ ಮನೆಗಳು...

ಶ್ರೀ ಎ. ಲಕ್ಷ್ಮೀಸಾಗರ್.—೮೨-೮೩ನೇ ಸಾಲಿಗೆ ೧.೨ ಲಕ್ಷ ಮನೆಗಳನ್ನು ಕಟ್ಟಿಸಿಕೊಡುತ್ತೇವೆ. ಎಂದು ಹಿಂದಿನ ಸರ್ಕಾರದವರು ಘೋಷಣೆ ಮಾಡಿದರು. ಆದರೆ ಅದಕ್ಕಾಗಿ ಅವರು ಎಲ್ಲೂ ಕೂಡ ಹಣವನ್ನೇ ಒದಗಿಸಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ...

ಶ್ರೀ ಲಕ್ಷ್ಮೀಸಾಗರ್.—ನಾನು ತಮಗೆ ಪೂರ್ಣವಾದ ಉತ್ತರವನ್ನು ಹೇಳುತ್ತೇನೆ. ಆನಂತರ ನೀವು ಪ್ರಶ್ನೆಗಳನ್ನು ಕೇಳಿ.

ಶ್ರೀ ಧರ್ಮಸಿಂಗ್.—೮೨-೮೩ರಲ್ಲಿ ಹರಿಜನ ಗಿರಿಜನರ ಮನೆಗಳಿಗೋಸ್ಕರ ಹಿಂದಿನ ಸರ್ಕಾರ ಹಣವನ್ನೇ ಒದಗಿಸಲಿಲ್ಲವೆಂದು ತಾವು ಹೇಳುತ್ತಿದ್ದೀರಿ...

ಶ್ರೀ ಎ. ಲಕ್ಷ್ಮೀಸಾಗರ್.—೧.೨ ಲಕ್ಷ ಮನೆಗಳನ್ನು ಪೂರ್ಣಗೊಳಿಸುವುದಕ್ಕೆ ಹಣವನ್ನು ಒದಗಿಸಿಲ್ಲವೆಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ಈಗ ನಮ್ಮ ಸರ್ಕಾರ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಈ ಬಾಬಿಗೆ ಹಣವನ್ನು ಒದಗಿಸಲು ಪ್ರಯತ್ನ ಮಾಡುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಬ್ಯಾಕ್‌ಲಾಗ್‌ನ್ನು ತುಂಬುವುದಕ್ಕೆ ನಾವು ಹಣವನ್ನು ಇಟ್ಟಿದ್ದೇವೆ ಎಂದು ತಾವು ಹೇಳುತ್ತಿದ್ದೀರಿ. ಹಾಗಾದರೆ ಸಂಪ್ಯ ತಾಲ್ಲೂಕಿನಲ್ಲಿ ಬ್ಯಾಕ್‌ಲಾಗ್ ಇರತಕ್ಕ ಮನೆಗಳನ್ನು ಪೂರ್ತಿಗೊಳಿಸುವುದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ ? ಹರಿಜನರಿಗೆ ಎಷ್ಟು ಮನೆಗಳು ಉಳಿಯುತ್ತವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ತಮಗೆ ಬೇಕಾದರೆ ವಿವರವನ್ನು ತರಿಸಿಕೊಡುತ್ತೇನೆ.

ಚೋಳನಾಯಕನಹಳ್ಳಿ ಇನಾಂ ಜಮೀನಿನ ಭೂ ಸ್ವಾಧೀನ ನಡವಳಿಕೆಗಳ ಬಗ್ಗೆ

೨೫೯. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು ಪರತ್ತು ಸಂಸದೀಯ ಮತ್ತು ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬೆಂಗಳೂರು ಉತ್ತರ ತಾಲ್ಲೂಕು ಚೋಳನಾಯಕನಹಳ್ಳಿ ಸರ್ವೆ ನಂ. ೧೦೨ ಸರ್ಕಾರಿ ಇನಾಂ ಜಮೀನನ್ನು ಹಿಂದುಳಿದ ವರ್ಗಗಳಿಗೆ ಮನೆ ನಿವೇಶನಗಳಿಗಾಗಿ ಭೂ ಸ್ವಾಧೀನ ನಡುವಳಿಕೆಗಳ. ರಾಜ್ಯಪತ್ರದಲ್ಲಿ ಈ ಹಿಂದೆ ಪ್ರಕಟವಾಗಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಭೂಸ್ವಾಧೀನದ ನಡವಳಿಕೆಯನ್ನು ಮುಂದುವರಿಸದಿದ್ದುದಕ್ಕೆ ಕಾರಣಗಳೇನು ?

ಇ) ಮೇಲ್ಕಂಡ ೧೦೨ರ ಸರ್ಕಾರಿ ಜಮೀನಿನಲ್ಲಿ ಖಾಸಗಿಯವರು ಮನೆ ನಿವೇಶನಗಳನ್ನು ಮಾಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ಬಾರದಿದ್ದರೇ ಸರ್ಕಾರದವರು ಕೈಕೊಂಡ ಕ್ರಮಗಳೇನು. ವಿವರಗಳನ್ನು ತಿಳಿಸುವುದು.

ಈ) ಸದರಿ ೧೦೨ರ ನಂಬರ್ ಜಮೀನಿನ ಅವ್ಯವಹಾರವನ್ನು ಸರ್ಕಾರದವರು ಸ್ಥಳ ಪರಿಶೀಲನೆ ಮಾಡಿಸಿ ವರದಿ ತರಿಸಿಕೊಂಡಿದ್ದಾರ್ಯೂ ಕೂಡ ನಿವೇಶನಗಳನ್ನು ಹಿಂದಿಳಿದ ವರ್ಗಗಳಿಗೆ ಹಂಚಲು ಕಾಲವಿಳಂಬ ಮಾಡುತ್ತಿರುವುದೇಕೆ ? ಕಾರಣಗಳೇನು ? ಎಷ್ಟು ದಿನಗಳಲ್ಲಿ ನಿವೇಶನಗಳನ್ನು ಹಂಚಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಹೌದು

ಆ) ಈ ಜಮೀನು ದೇವಾಲಯ ಇನಾಂತಿ ಹಾಗೂ ಈ ಜಮೀನಿನ ಅನುಭೋಗದ ಹಕ್ಕು ಯಾರಿಗೂ ಸ್ಥಿರೀಕೃತವಾಗಿಲ್ಲವೆಂದು ತಿಳಿದುಕೊಂಡ ಮೇಲೆ ಈ ಜಮೀನಿಗೆ ಭೂ ಸ್ವಾಧೀನದ ನಡವಳಿಕೆ ಬೇಕಾಗಿಲ್ಲವೆಂದು ಆದರೆ ನೇರವಾಗಿ ಈ ಜಮೀನನ್ನು ಬೇಕಾಗಿರುವ ಉದ್ದೇಶಕ್ಕೆ ಸರ್ಕಾರಿ ಸುತ್ತೋಲೇ ನಂ. ಆರ್‌ಡಿ ೫೦ ಎಕೆಸಿ ೭೧ ತಾರೀಖು ೨೧-೭-೧೯೭೨ರ ಪ್ರಕಾರ ಸರ್ಕಾರದ ಆದೇಶ ಪಡೆದುಕೊಂಡು ಉಪಯೋಗಿಸಿಕೊಳ್ಳಬಹುದೆಂದು ತಿಳಿದು ಬಂದ ಮೇಲೆ, ಭೂಸ್ವಾಧೀನ ನಡವಳಿಕೆಗಳನ್ನು ಕೈಬಿಡಲಾಯಿತು. ಮತ್ತು ತಾರೀಖು ೩೦-೪-೭೯ರಂದು ಹೊರಡಿಸಿದ್ದ ಪ್ರಾಥಮಿಕ ಅಧಿಸೂಚನೆಯನ್ನು ರದ್ದುಗೊಳಿಸಲಾಯಿತು. ಸದರೀ ರದ್ದುಗೊಳಿಸಿದ ಅಧಿಸೂಚನೆ ರಾಜ್ಯಪತ್ರದಲ್ಲಿಯೂ ತಾರೀಖು ೧೫-೫-೮೦ರಂದು ಪ್ರಕಟವಾಯಿತು ಆದರೆ ಸರ್ಕಾರ ಈ ಜಮೀನಿನಲ್ಲಿ ನಿವೇಶನಗಳನ್ನು ವಿಂಗಡಿಸಿ ಹಂಚುವುದಕ್ಕೆ ತೆಗೆದುಕೊಳ್ಳುವುದರೊಳಗಾಗಿ ಜಮೀನಿನ ಅನುಭೋಗದ ಹಕ್ಕನ್ನು ಬೆಂಗಳೂರು ಉತ್ತರ ತಾಲ್ಲೂಕು ಲ್ಯಾಂಡ್ ಟ್ರಿಬ್ಯುನಲ್ ಆರ್ಜಕರಾದ ಶ್ರೀ ಗುಂಡಪ್ಪ ಎಂಬುವವರಿಗೆ ಧೃಢೀಕರಿಸಲಾಯ್ತು ನಂತರ ಈ ಜಮೀನು ವಸತಿ ನಿರ್ಮಾಣಕ್ಕಾಗಿ ಬೆಂಗಳೂರು ವಿಶೇಷ ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ಭೂ ಪರಿವರ್ತನೆಯಾಯಿತು. ಈ ಕಾರಣಗಳಿಂದ ಭೂ ಸ್ವಾಧೀನ ನಡಂವಳಿಕೆ ಮುಂದುವರಿಸಿರುವುದಿಲ್ಲ.

ಇ) ಈ ವಿಷಯ ಸರ್ಕಾರದ ಗಮನಕ್ಕೆ ಈಗ ತಾನೆ ಬಂದಿದೆ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಈ) ಪೂರ್ಣ ವಿವರಗಳ ಬಗ್ಗೆ ವರದಿ ಇನ್ನೂ ಬರಬೇಕಾಗಿದೆ ವರದಿ ಬಂದನಂತರ ಪರಿಶೀಲಿಸ ಲಾಗುವುದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಯನ್ನು ತಡೆಹಿಡಿಯಬೇಕು. ಪೂರ್ಣವಾದ ಮಾಹಿತಿಗಳು ಬಂದಿಲ್ಲದಿರುವುದರಿಂದ ಅದನ್ನು ತರಿಸಿಕೊಂಡು ಉತ್ತರ ಕೊಡುತ್ತೇನೆ.

ಶ್ರೀ ಎಂ ಎಸ್. ಕೃಷ್ಣನ್.—ಸ್ವಾಮಿ, ಇಲ್ಲಿ ಮನೆ ನಿವೇಶನಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಎಂಬುದಕ್ಕೆ ''ಬಂದಿದೆ, ಕ್ರಮ ತೆಗೆದು ಕೊಳ್ಳುತ್ತೇವೆ'' ಎಂದು ಉತ್ತರವನ್ನು ಹೇಳಿದ್ದೀರಿ. ನಾನಾದರೂ ಹೇಳುತ್ತೇನೆ ಮೊದಲು ಈ ನಿವೇಶನಗಳು ಮಾರಾಟವಾಗುವುದನ್ನು ತಡೆಹಿಡಿಯಿರಿ. ಮಾರಾಟ ಮಾಡುವವರನ್ನು ಹಿಡಿದು ಜೈಲಿಗೆ ಹಾಕಿ. ಉಳಿದ ವಿಷಯವನ್ನು ಆಮೇಲೆ ಚರ್ಚೆ ಮಾಡೋಣ. ನಾವೂ, ನೀವೂ ಒಟ್ಟಿಗೇ ಕೂತು ಚರ್ಚೆಮಾಡಿ ಕ್ರಮ ತೆಗೆದುಕೊಳ್ಳೋಣವೆಂದು ತಾವು ಹೇಳುವುದಾದರೆ ಅದಕ್ಕೆ ನಾನು ಸಿದ್ಧ. ನಾನು ಮಿತಕ್ಕೆ ಹೇಳಬಿಡ್ದೀನೆಂದರೆ, ಮುಂದಿನ ಸಾರಿ ಅಧಿವೇಶನ ಬರುವ ಹೊತ್ತಿಗೆ ಆವರು ಜಮೀನನ್ನೆಲ್ಲಾ ಮಾರಿಕೊಂಡು ಹೊರಟು ಹೋದರೆ ಇವರಿಗೆಲ್ಲಾ ನಾಮ ಬೀಳುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಜೋಳನಾಯ್ಕನ ಪಳ್ಳಿಗೆ ಸಂಬಂಧಪಟ್ಟಂತೆ ಭೂಸ್ವಾಧೀನ ಪಡಿಸಿಕೊಳ್ಳುವ ವಿಚಾರಕ್ಕೆ ಸಂಬಂಧಪಟ್ಟಂತೆ ನನಗೆ ಬಂದಿರತಕ್ಕ ಮಾಹಿತಿಯ ಪ್ರಕಾರ ಈ ಜಮೀನನ್ನು ಸ್ವಾಧೀನ ಮಾಡಿಕೊಳ್ಳಬೇಕೆಂಬ ಪ್ರಯತ್ನ ನಡೆಯಿತು. ಆದರೆ ಇದು ಗಾನಾಂತಿ ಜಮೀನು. ಆದ್ದರಿಂದ ಇದನ್ನು ಭೂಸ್ವಾಧೀನ ಮಾಡಿಕೊಳ್ಳುವುದು ಬೇಡ ಎಂದು ಪ್ರಿಲಿಮಿನರಿ ನೋಟಿಫಿಕೇಷನ್‌ನ್ನು ಕ್ಯಾನ್ಸಲ್ ಮಾಡಿದ್ದೇವೆ. This is subject to getting fuller information. That is why I made a request that the question may be held over.

SRI M. S. KRISHNAN.—I have no objection but my only request is that.....

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಈಗ ಬಂದ ಮಾಹಿತಿಯ ಪ್ರಕಾರ ಗುಂಡಪ್ಪ ಎನ್ನುವ ವ್ಯಕ್ತಿ ಲ್ಯಾಂಡ್ ಟ್ರಿಬ್ಯುನಲ್ ಮುಂದೆ ಹೋಗಿ ಈ ಜಮೀನು ನನಗೆ ಸೇರಿದ್ದು, ಇದನ್ನು ಸ್ವಾಧೀನ ಮಾಡಿಕೊಳ್ಳಬಾರದೆಂದು ಅರ್ಜಿ ಹಾಕಿದ. ಅದು ಅವನ ಪರವಾಗಿ ಇತ್ಯರ್ಥವಾದನಂತರ ಅವನು ಅದನ್ನು ಕನ್‌ವರ್ಟ್ ಕೂಡ ಮಾಡಿಸಿಕೊಂಡಿದ್ದಾನೆ. ಅನಂತರ ಆ ಜಮೀನನ್ನು ಪ್ಲಾಟ್ಸ್ ಮಾಡಿ ಮಾರಾಟ ಮಾಡುವ ಸಮಯದಲ್ಲಿ ಯಾರೋ ಬೇರೆಯವರು ದೂರು ಕೊಟ್ಟಿದ್ದರ ಮೇರೆಗೆ ಜಿಲ್ಲಾಧಿಕಾರಿಯವರು ಬಿ.ಡಿ.ಓ. ಅವರನ್ನು ಕಳುಹಿಸಿ ಇದರ ಬಗ್ಗೆ ವಿವರವನ್ನು ತಿಳಿದುಕೊಂಡು ಬನ್ನಿ ಎಂದು ಕಳುಹಿಸಿದ್ದಾರೆ. ಮತ್ತು ಅವರ ವರದಿಯ ಪ್ರಕಾರ ಅವನು ಮಾರಾಟ ಮಾಡುತ್ತಿದ್ದಾನೆ, ಇದನ್ನು ನಾವು ಅಕ್ವೈರ್ ಮಾಡಿಕೊಳ್ಳಬಹುದು. ಆದರೆ ಬೆಲೆ ಜಾಸ್ತಿ ಇದೆಯೆಂದು ವರದಿಯನ್ನು ಕೊಟ್ಟಿದ್ದಾರೆ. ಈಗ ಇದರಲ್ಲಿ ಪೂರ್ಣವಾದ ವಿವರ ಸಿಕ್ಕದಿರುವ ಪ್ರಯುಕ್ತ ಇದಕ್ಕೆ ಸಂಬಂಧಪಟ್ಟಂತೆ ಪೂರ್ಣ ವಿವರವನ್ನು ತರಿಸಿಕೊಂಡು ಹೇಳುತ್ತೇನೆಂದು ನಾನು ಹೇಳಿದ್ದೇನೆ. ತಾವು ಏನು ಹೇಳುತ್ತಿದ್ದೀರಿ, ಈ ಸೈಟುಗಳನ್ನೆಲ್ಲಾ ಮಾರಾಟ ಮಾಡಿದಮೇಲೆ ನಮಗೆ ಆ ಜಾಗ ಸಿಕ್ಕುವುದಿಲ್ಲ, ಆಲ್ಲಿರತಕ್ಕ ಜನರಿಗೆ ತೊಂದರೆಯಾಗುತ್ತದೆ, ಆದ್ದರಿಂದ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಎಂದು ಕೇಳಿದ್ದೀರಿ. ಈಗ ಬಂದಿರತಕ್ಕ ಗಂಡಾಂತರಕ್ಕೆ ಪರಿಹಾರ ಏನೆಂಬುದು ತಮಗೆ ಬೇಕಾಗಿರುವುದು.....

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿರತಕ್ಕ ದುರ್ಬಲವರ್ಗದವರಿಗೆ. ಹಿಂದುಳಿದವರ್ಗದವರಿಗೆ ೧೧೦ನೇ ಸರ್ವೆ ನಂಬರ್‌ನಲ್ಲಿ ಸೈಟು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಈ ೧೧೦ನೇ ಸರ್ವೆ ನಂಬರು ಪೂರ್ತಿಯಾಗಿ ಗುಡ್ಡ ಮತ್ತು ಬಂಡೆಗಳಿಂದ ತುಂಬಿರುವುದರಿಂದ ಅಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ನಮಗೆ ೧೧೦ನೇ ಸರ್ವೆ ನಂಬರ್‌ನಲ್ಲಿ ಕೊಡಿ ಎಂದು ಅವರು ಕೇಳಿದರು. ಆದರೆ, ಕೊನೇ ಗಳಿಗೆಯವರೆಗೂ ಕೊಡುತ್ತೇವೆಂದು ಆವರಿಗೆ ಆಸೆ ತೋರಿಸಿ ಕೊನೆಗೆ ಒಳಗೊಳಗೇ ಕರಾಮತ್ತು ಮಾಡಿ ಹೆಬ್ಬಾಳ ಯೂನಿವರ್ಸಿಟಿಯಲ್ಲಿ ಸುಮಾರು ೧೦೦೦–೧೨೦೦ ರೂಪಾಯಿ ಸಂಬಳ ತೆಗೆದುಕೊಳ್ಳುತಕ್ಕ ಈ ಗುಂಡಪ್ಪ ಮತ್ತು ಕೆಲವು ಅಧಿಕಾರಿಗಳೂ ಹಾಗೂ ಲ್ಯಾಂಡ್ ಟ್ರಿಬ್ಯುನಲ್‌ನವರೂ ಸೇರಿಕೊಂಡು ಈ ಜಮೀನನ್ನು ತಮ್ಮ ಸ್ವಾಧೀನ ಮಾಡಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಈ ತಕ್ಷಣವೇ ತಾವು ಕ್ರಮ ತೆಗೆದುಕೊಂಡು ಸೈಟುಗಳ ಮಾರಾಟವನ್ನು ತಡೆಗಟ್ಟದಿದ್ದರ ನಾನು ಈ ಪ್ರಶ್ನೆಯನ್ನು ಕೇಳಿದ್ದಕ್ಕೆ ಏನೂ ಪ್ರಯೋಜನವಾಗುವುದಿಲ್ಲ. ಆ ಜಮೀನು ಹರಿಜನಗಿರಿಜನರಿಗೆ ಸಿಕ್ಕುವುದಿಲ್ಲ. ಯಾರೋ ಕೆಲವು ಬಲಿಷ್ಠರು ಅದನ್ನು ತೆಗೆದುಕೊಳ್ಳುತ್ತಾರೆ.

ಉಪಾಧ್ಯಕ್ಷರು.—ಆ ಕನ್‌ವರ್ಷನ್ ಆರ್ಡರನ್ನು ತೆಗೆದುಕೊಂಡು ಹೋಗಿ ಹೈಕೋರ್ಟ್‌ನಲ್ಲಿ ಛಾಲೆಂಜ್ ಮಾಡಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಹೈಕೋರ್ಟಿಗೂ ಹೋಗಿದ್ದಾರೆ.

MR. DEPUTY SPEAKER.—Regarding conversion order, you can challange it in the High Court because occupancy right can not be converted.

SRI M.S. KRISHNAN.—But what has happened is that though they have gone to the High Court, I am very sorry, Mr. K.S.N. Murthy Revenue Commissioner and Secretary to Government, Revenue

Department, on November 17, 1982 has stated in his letter that however the proceedings before the High Court would not be a bar for completing the acquisition proceedings. Sir this is a very serious matter. This is not a small matter. An Officer of the Secretary of the Revenue Department says like that, what we should do ? If he says like this, then what will happen to the backward community people, Harijans and Girijans ? They lose the whole land and they don't have any land and that is why this advice itself is wrong. The advice of Mr Murthy is thoroughly wrong and that has to be set-aside by the Hon'ble Minister, The most important point is on the 16th February 1983. i.e., last month, a report has been sent to the Governmen'. Unfortunately, the Hon'ble Minister was saying that he has not received it. On 16-2-1983, the Block Development Officer, Bangalore North Yelahanka had sent a report to the Deputy Commissioner, Bangalore District and I will just read what he mentioned in his report. It reads thus :

"With reference to the subject cited above. I submit to state that the Block Development Officer has been advised to inspect the spot of S.No. 110 and S.No. 102 of Cholanaikarahalli and to furnish a report on two points viz , (i) suitability or otherwise of the land in S. No. 110 for formation of sites (2) whether the land in S.No. 102 is being sold out as sites by some people of the village at exborbitant rate. so far as point No. one is concerned i.e., suitability or otherwise of land in S.No. 110, I submit to state that S.No, 110 is a Hillock formed by hard rock. The stone cutters have also deformed by cutting here and there, spoiling the surface of the rock. This Office records shows distribution of 69 (sixtynine) sites to the siteless and landless people of Cholanaikanahalli in S.No. 110, during 1974 which is not fit for formation of sites even to-day. This Hillock could be better developed under "Afforestation Scheme" which may give a good look to the village. In view of the facts stated. people to whom possession certificates have been issued are not in a possition to occupy the sites on the rocks. They are also unable to construct houses on the rocks, as they are living from hand to mouth. Therefore the S.No. 102 was proposed for acquisition for distribution of sites to the siteless and landless people and with regard to point no two, i.e., the S No. 102 is being sold out as sites by some people of the village at exhorbitant rates as alleged by Sri Shambulingeswara Harijan Yuvaka Mandal the spot inspection reveals that S.No. 102 is now formed

into sites by private people and also being sold at exhorbitant rates. This Act of forming and selling of sites by private people has caused inconvenience to the siteless and landless people, as there are no other suitable lands for acquisition for sites. Therefore, it is necessary to prevent formation of sites by private people in the interest of siteless and landless people of Cholanaikanahalli"

This is a report sent by the Block Development Officer to the Deputy Commissioner, Bangalore District on 16-2-1983. I am surprised that the Government has not got this report. I wonder how the Government is functioning though it is more than one month that the question has been asked, the Hon'ble Minister is saying that he has not received it. Now he says he want time. I have no objection but my fear is that if there is any more delay, these people will lose the land. Therefore, will the Government assure that the land will not be given to anybody else and this will be given to the Harijans and Girijans i.e., lands in S.No. 102 to Harijans and Girijans and backward class people ? If they give me that assurance I have no objection for holding over this question. I will pass on three papers to the Chair and the Chair can give these papers to the Hon'ble Minister. I am having this report but I am surprised to hear that the Hon'ble Minister has not received it

SRI A. LAKSHMISAGAR.—I will consider the suggestion made by the Hon'ble Member Sri M. S. Krishnan. ಈಗ ಅವರ ಪೇಳಿಕೆಯು ಪ್ರಕಾರ ವಾಗಿದೀ ಇದು ಕೋರ್ಟಿನಲ್ಲಿರುತ್ತದೆ. ಅವರ ಅಭಿಪ್ರಾಯದ ಪ್ರಕಾರ ಜಮೀನನ್ನು ಆಕ್ವೈರ್ ಮಾಡಿಕೊಳ್ಳುವುದಕ್ಕೆ ಕಾನೂನಿನಲ್ಲಿ ತೊಡಕೇನು ಇಲ್ಲವೆಂದು ಕೂಡ ಹೇಳಿದ್ದಾರೆ. ಅದು ಅಲ್ಲದೆ ಇದು ಬೆಂಗಳೂರು ಅಗ್ಲಮರೇಷನ್‌ಗೆ ಸೇರಿದೆ ಎಂದೂ ಕೂಡ ಹೇಳಿದ್ದಾರೆ. ಆದ್ದರಿಂದ ಜಮೀನನ್ನು ಆಕ್ವೈರ್ ಮಾಡಿಕೊಳ್ಳುವುದಕ್ಕೆ ಸಾಧ್ಯವಿದ್ದರೆ ಅದನ್ನು ತಕ್ಷಣ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

SRI M. S. KRISHNAN.—I want an assuarance.....

KR DEPUTY SPEAKER.—Can I direct the Government to give an answer in a particular manner ?

SRI A. LAKSHMISAGAR.—Even if the land is to be acquired, a priliminary notification has got to be issued and the parties must be informed and thereafter, the other proceedings will start. Till then, we cannot stop it, I can understand the feelings of the Hon'ble Member. If it is possible, I will get this examined. That much I can tell.

SRI M. S. KRISHNAN.—Earlier, it was proposed for acquisition for these landless and Harijans and Girijans and some people got it. Who is responsible for this ? Don't you haul him up and why don't you take him to task and punish him ; But see that at the same

time, relief is given to these people. The previous Government has done it but Officers are same. Why don't you take action against the Officers who are responsible for this ? See that the land is given to the Harijans and Girijans. Why don't you do that ? They must have courage to say that they are going to do it. That is what I expected from them.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ವಿಷಯದಲ್ಲಿ ಬಹಳ ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಅಧಿಕಾರಿಗಳು ಹರಿಜನರಿಗೆ ಯಂಚಿತಕ್ಕಂಥ ಜಮೀನನ್ನು ನಿಲ್ಲಿಸಿ ಬೇರೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಅದು ಅವರಿಗೆ ಉಂಟಾಗಿರುವ ಭಯವನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ. ಆದ್ದರಿಂದ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸುಮ್ಮನೆ ತಪ್ಪಿಹಿಡಿದ ಪಾತ್ರಕ್ಕೆ ಏನು ಪ್ರಯೋಜನವಾಗುವುದಿಲ್ಲ. ಅಷ್ಟರಲ್ಲೇ ಮೂರು ನಾಮ ಹಾಕಿಬಿಡುತ್ತಾರೆಂದು ಹೇಳಿರುತ್ತಾರೆ. ಏತಕ್ಕೆಂದರೆ ಮಾನ್ಯ ಎಂ. ಎಸ್. ಕೃಷ್ಣರವರು ಅಯ್ಯಂಗಾರ್‌ರವರು, ಅವರು ಮೂರು ನಾಮ ಹಾಕಿಕೊಳ್ಳತಕ್ಕಂಥವರು.

ಶ್ರೀ ಎಂ. ಎಸ್. ಕೃಷ್ಣನ್.—ಕಮ್ಯುನಿಸ್ಟ್ ಪಕ್ಷದವರು ಮೂರು ನಾಮ ಹಾಕತಕ್ಕಂಥವರಲ್ಲ. ನಾಮ ಹಾಕಿಸಿಕೊಳ್ಳತಕ್ಕಂಥವರೂ ಅಲ್ಲ

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಾನ್ಯ ಅಧ್ಯಕ್ಷರೇ, ಏನಾಗಿದೆ ಎಂದರೆ ಹರಿಜನರಿಗೆ ಜಮೀನು ಸಿಕ್ಕದ ಹಾಗೆ ಮೇಲ್‌ಜಾತಿಯವರು ತಡೆ ಮಾಡಂತ್ತಿದ್ದಾರೆ ಎನ್ನುವ ಪಾನೋಭಾವ ಬಂದಿರುತ್ತದೆ. ಆದ್ದರಿಂದ ಜರೂರು ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳೂ ಇರುತ್ತಾರೆ. ಅವರು ಇದರ ಬಗ್ಗೆ ಭರವಸೆಯನ್ನು ಕೊಡಬೇಕು. ಜಮೀನು ಹರಿಜನರಿಗೆ ಸಿಕ್ಕುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಗೌರವ ಧನ ಪಡೆಯುವ ಪದವೀಧರರಿಗೆ ಉದ್ಯೋಗಾವಕಾಶ ಕಲ್ಪಿಸುವ ಬಗ್ಗೆ.

೨೬೧. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ). ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಗೌರವಧನ ಪಡೆಯುವ (ನಾನ್ ಸ್ಟೈಫಂಡರಿ) ಪದವೀಧರರ ಸಂಖ್ಯೆ ಎಷ್ಟು ?

ಆ) ಅವರನ್ನು ಸರ್ಕಾರ ಗೌರವಧನ ಪಡೆಯುವವರನ್ನಾಗಿ ಪರಿವರ್ತಿಸುವ ಸಲುವೆ ಏನಾದರೂ ಸರ್ಕಾರಕ್ಕಿದೆಯೇ ?

ಇ) ಇಲ್ಲವಾದಲ್ಲಿ ಸ್ವಯಂ ಉದ್ಯೋಗಾವಕಾಶವನ್ನು ಕಲ್ಪಿಸುವುದಕ್ಕೆ ಸರ್ಕಾರದವರು ಯಾವ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. (ಯೋಜನೆಗಳ ವಿವರವಾದ ಪಟ್ಟಿಯನ್ನು ಒದಗಿಸುವುದು)

ಶ್ರೀ ಆಜೀಜ್ ಸೇಟ್ (ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು) —

ಅ) ೫೩, ೬೯೧ (ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ದಿನಾಂಕ ೩೧-೧೨-೧೯೮೨ರವರೆಗೆ ನೋಂದಾಯಿಸಿರುವರು).

ಆ) ಏನೂ ಇಲ್ಲ.

ಇ) ಸ್ವಯಂ ಉದ್ಯೋಗಾವಕಾಶವನ್ನು ಕಲ್ಪಿಸುವ ಯಾವ ಯೋಜನೆಗಳೂ ಉದ್ಯೋಗ ವಿನಿಮಯ ತರಬೇತಿ ಇಲಾಖೆಯಲ್ಲಿ ಇಲ್ಲ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಸಚಿವರು ಪದವೀಧರರಿಗೆ ಉದ್ಯೋಗವನ್ನು ಕಲ್ಪಿಸತಕ್ಕಂಥದ್ದು ಹಿಂದಿನಿಂದಲೂ ಬಂದಿಲ್ಲವೆಂದು ಹೇಳಿದರು. ಆದರೆ ಇದು ಎರಡು ಬಗ್ಗೆಯ ನೀತಿಯಾಗಿರುತ್ತದೆ. ಒಬ್ಬರ ಕಣ್ಣಿಗೆ ಸುಣ್ಣ ಹಚ್ಚುವುದು, ಇನ್ನೊಬ್ಬರ ಕಣ್ಣಿಗೆ ಬೆಣ್ಣೆಯನ್ನು ಹಚ್ಚತಕ್ಕಂಥ ಕೆಲಸವಾಗಿರುತ್ತದೆ. ಆದ್ದರಿಂದ ಈ ವ್ಯವಸ್ಥೆಯಲ್ಲಿ ಯಾವುದಾದರೂ ನೈತಿಕ ವಿಚಾರ ಸರ್ಕಾರಕ್ಕೆ ಇದೆಯೇ ಎಂದು ಕೇಳುತ್ತೇನೆ.